ಅಪ್ಪನ ಕೋಪ ಕೊಂಕಾಗಿ ಕುಟುಕಿದ ಘಟನೆಯ ಬಗ್ಗೆ ಹೇಳಲೇಬೇಕು. ಒಂದು ಗುರುವಾರ ನಾನು ಚೆನ್ನಾಗಿ ಪಾವ್‌ಭಾಜಿ ಮೆದ್ದು ಪ್ರತಿಭಾಳೊಟ್ಟಿಗೆ ಮನೆಗೆ ಬಂದಾಗ ಅಪ್ಪ ಗಂಭೀರವಾಗಿ, "ಸುಮ್ಮನ ಆ ಬಾಳೂನ್ನ ಮದವಿ ಮಾಡಕೋತಿಯೇನ ನೋಡು. ದಿನಾ ಫುಕಟ ಪಾವ್‌ಭಾಜಿ ತಿನಬಹುದು. ಪ್ಲೇಟ್ ತೊಳದ್ರಾತು" ಎಂದರು. ನಾನೂ ಅದೇ ಧಾಟಿಯಲ್ಲಿ ಅಷ್ಟೇ ಗಂಭೀರವಾಗಿ, "ಅಂವಗ ಮದಿವ್ಯಾಗೇದ ಪಪ್ಪಾ" ಎಂದಿದ್ದೆ. "ಮದವಿ ವಯಸ್ಸಿನ ಮಕ್ಕಳಿಲ್ಲೇನು?" ಎಂದಾಗ "ಇಲ್ಲ... ಇನ್ನೂ ಸಣ್ಣ ಅವ. ಪ್ಲೇಟು ತೊಳೀತಾವ" ಎಂದು ಉತ್ತರಿಸಿದ್ದೆ. "ಹೋಗ್ಲಿ... ತಮ್ಮಂದ್ರಿದ್ದಾರೇನ ನೋಡು" ಎಂದಾಗ, "ಅವರದೂ ಮದಿವ್ಯಾಗೇದ ಬಿಡ್ರಿ" ಎಂದು ಕೈತೊಳೆದುಕೊಂಡಿದ್ದೆ. ಅಪ್ಪ, "ಛೆ! ಎಂಥಾ ಚಾನ್ಸ ತಪ್ಪಿತು ನೋಡು" ಎಂದು ಕೊಂಕು ನುಡಿದು ನನ್ನ ಕಾಲೆಳೆದಿದ್ದರು. ನಾನೇನೂ ಬೇಜಾರು ಮಾಡಿಕೊಳ್ಳಲಿಲ್ಲ ಬಿಡಿ. ಅವರೂ ಸಹ ಮಗಳು ಬೀದಿಯಲ್ಲಿ ನಿಂತು ತಿನ್ನುವುದನ್ನು ತಪ್ಪಿಸಲು ಮನೆಯಲ್ಲೇ ಪಾವ್‌ಭಾಜಿ ತಯಾರಿಸಿದ್ದೂ ಇತ್ತು. ತಮಗೆ ಗೊತ್ತಿದ್ದ ಹಳೆಯ ಪದ್ಧತಿಯಂತೆ ಕೊಬ್ಬರಿ ಗಿಟಕು ಮತ್ತೆ ಈರುಳ್ಳಿಗೆ ಎಣ್ಣೆ ಒರೆಸಿ ಗ್ಯಾಸ್ ಒಲೆಯ ಮೇಲಿಟ್ಟು ಸುಟ್ಟು ಅದನ್ನು ರುಬ್ಬಿ... ಆಲೂಗಡ್ಡೆ, ಹೂಕೋಸು ಬೇಯಿಸಿ ಹಾಕಿ ಪಲ್ಯ ಮಾಡಿದ್ದರು. ಪಾಪ... ತುಂಬಾ ಕಷ್ಟಪಟ್ಟಿದ್ದರು. ಅಮ್ಮ ಒರಳಿನಲ್ಲಿ ರುಬ್ಬಿಕೊಟ್ಟಿದ್ದಳು. ಪ್ಲೇಟ್‌ನಲ್ಲಿ ಎಲ್ಲ ಪದಾರ್ಥಗಳನ್ನು ಹಾಕಿ ಅಲಂಕರಿಸಿ ಕೊಟ್ಟಿದ್ದರು. ನಾನೂ ಪ್ರಾಮಾಣಿಕವಾಗಿ, "ಪಪ್ಪಾ... ಬಟಾಟಿ ಪಲ್ಯಾ ಛೊಲೊ ಆಗೇದ. ಆದರ ಪಾವ್‌ಭಾಜಿಗತೆ... ಅದರಾಗೂ ಬಾಳುನಗತೆ ಆಗಿಲ್ಲ" ಎಂದು ಶರಾ ಬರೆದುಬಿಟ್ಟೆ. ಅಪ್ಪ ಕೋಪದಿಂದ, "ಅಲ್ಲೇ ತಿಂದು ಸಾಯ್ರಿ" ಎಂದು ಆಶೀರ್ವಾದ ಮಾಡಿದವರು ಮತ್ತೆ ಮಾಡುವ ಗೋಜಿಗೇ ಹೋಗಲಿಲ್ಲ.

ಅಂದಿನ ದಿನಗಳಲ್ಲಿ ಬೆಳಗಾವಿಯಲ್ಲಿ ಪಾವ್‌ಭಾಜಿಗೆ ಸಮೀಪದ ಪ್ರತಿಸ್ಪರ್ಧಿಯೆಂದರೆ "ಭೇಳ್" ಮಾತ್ರ. "ವಡಾಪಾವ್" ಕೂಡ ನಿಧಾನಕ್ಕೆ ಓಡುತ್ತಿತ್ತು. ವೆಂಕಟೇಶ್ವರ ಹೋಟಲ್‌ನಲ್ಲಿ "ಸಾಬೂದಾಣಿ ವಡಿ (ಸಬ್ಬಕ್ಕಿ ವಡೆ)" ಕೂಡ ಸಿಗುತ್ತಿತ್ತು. ಹೋಟೆಗಳಲ್ಲಿ ಇಡ್ಲಿ, ದೋಸೆ, ಪುರಿಭಾಜಿ ಮಾಮೂಲಾಗಿ ದೊರಕುತ್ತಿದ್ದವು. ಆದರೆ, ನಾವು ಮಿರ್ಚಿ ಭಜಿ, ಗಿರ್ಮಿಟ್ ಮುಂತಾದವುಗಳ ಹೆಸರನ್ನೇ ಕೇಳಿರಲಿಲ್ಲ. ನಮ್ಮ ಮನೆಯ ಮೇಲ್ಗಡೆ ಬಾಡಿಗೆಗೆ ಬಂದ ರೇಖಾ ಆಂಟಿ ಅಮ್ಮನ ಕಿಟ್ಟಿ ಸೇರಿದರು. ಅವರೊಬ್ಬರೇ ಚಿಕ್ಕವರು. ಉಳಿದವರೆಲ್ಲ ಐವತ್ತರ ಗಡಿ ದಾಟಿದವರೇ. ಅವರಿಗೆ ಚೀಟಿ ಬಂದಾಗ ಪಾವ್‌ಭಾಜಿ ಮಾಡಲು ನಿರ್ಧರಿಸಿದರು. ನನ್ನನ್ನೂ ಅದರಲ್ಲಿ ಸೇರಿಸಿಕೊಂಡರು. ನನಗೂ ಸಂತಸವೇ... ಕೆಲವೊಂದು ಮಸಾಲೆಗಳನ್ನೆಲ್ಲ ಕುಟ್ಟಿ ಪುಡಿ ಮಾಡಿ ಸೇರಿಸಿದ್ದರು. ಪುಣೆ, ಮುಂಬೈಗಳಲ್ಲಿ ರೆಡಿಮೇಡ್ ಮಸಾಲೆಯೇ ಸಿಗುವುದೆಂದೂ ಹೇಳಿದರು. ಸಿಕ್ಕರೂ ಪ್ರಯೋಜನವಿರಲಿಲ್ಲ ಬಿಡಿ. ಆಗ ಅಮ್ಮ ಹಾಗೆಲ್ಲ ತನ್ನ ಮಸಾಲೆ ಬಿಟ್ಟು ಹೊರಗಿನ ಮಸಾಲೆಗೆ ಅಡುಗೆಮನೆಯಲ್ಲಿ ಪ್ರವೇಶ ನೀಡುತ್ತಿರಲಿಲ್ಲ. ಆಂಟಿ ಚೆನ್ನಾಗೇ ಮಾಡಿದ್ದರು. ಈರುಳ್ಳಿ, ಕೊತ್ತಂಬರಿ ಸೊಪ್ಪು, ಸೇವು ಮೇಲೆ ಹಾಕಿ ಥೇಟ್ ಬಾಳುನಂತೆಯೇ ಅಲಂಕಾರ ಮಾಡಿ ಕೊಟ್ಟಿದ್ದೆವು. ರುಚಿಯೂ ಅವನ ಪಾವ್‌ಭಾಜಿಗೆ ಸನಿಹದಲ್ಲಿದ್ದು ಚೆನ್ನಾಗಿತ್ತು. ಆದರೆ, ಬಂದ ಮಹಿಳಾ ಮಂಡಲಕ್ಕೆಲ್ಲ ಅದನ್ನು ತಿಂದು ಗೊತ್ತಿಲ್ಲ. ಹೇಗೆ ತಿನ್ನುವುದೆಂದು ಒಂದು ಕ್ಷಣ ಯೋಚಿಸಿದವರು ಪಾವನ್ನೆಲ್ಲ ತುಂಡು ಮಾಡಿ ಭಾಜಿಯಲ್ಲಿ ಕಲೆಸಿ ಹುಳಿಯನ್ನದಂತೆ ಮಾಡಿಬಿಟ್ಟರು. ಒಂದೊಂದೇ ತುತ್ತನ್ನು ಬಾಯಿಗಿಳಿಸುತ್ತಿದ್ದರೆ ಬೆಕ್ಕಸ ಬೆರಗಾದವರು ನಾವು... ಮಾಡಿದವರು. "ಹಂಗಲ್ಲ... ಹಿಂಗ ತಿನಬೇಕು" ಎಂದು ಹೇಳಹೊರಟರೆ, "ಹೊಟ್ಯಾಗ ಹೋದ ಮ್ಯಾಲೆ ಎಲ್ಲಾ ಕೂಡಿಕೋತದಲಾ..." ಎಂದು ನಮ್ಮ ಬಾಯಿ ಮುಚ್ಚಿಸಿದ್ದರು. ಮನೆಗೆ ಬಂದ ಮೇಲೆ ಅಮ್ಮ, "ಛಂದಾಗಿ ಪುರಿ ಖೀರು, ಶ್ರೀಖಂಡ, ಬಾಸುಂದಿ, ಇಡ್ಲಿ, ದ್ವಾಶಿ... ಹಿಂತಾದೇನರೆ ಮಾಡಬೇಕಿಲ್ಲೋ... ಪಾವ್‌ಭಾಜಿ ಮಾಡ್ಯಾರ. ಅದನ್ನ ಹೆಂಗ ತಿನ್ನೋದಂತ ನಮಗ